ಬೆಂಗಳೂರು ಮಹಾನಗರ ಪಾಲಿಕೆ ಪಡೆದ ಸಾಲ

4493 - ಶ್ರೀ ಪಿ.ಸಿ. ಮೋಹನ್ ಎಂಎಲ್ಎ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *2000-2001ನೇ ಸಾಲಿನವರೆಗೆ ಬೆಂಗಳೂರು ಮಹಾನಗರ ಪಾಲಿಕೆಯು ಸಾಲದ ಮರುಪಾವತಿ ಮಾಡಬೇಕಾದ ಸಂಸ್ಥೆಗಳು ಯಾವುವು?*

ಆ) *ಇದರಲ್ಲಿ ಅಸಲು ಹಣವೆಷ್ಟು ಹಾಗೂ ಬಡ್ಡಿ ಹಣವೆಷ್ಟು? (ಸರ್ಕಾರಿ, ಅರೆಸರ್ಕಾರಿ ಹಾಗೂ ಕಾಂಟ್ರಾಕ್ಟ್‌ದಾರರ ಬಿಲ್‌ಗಳು ಸೇರಿದಂತೆ ಪೂರ್ಣ ವಿವರ ನೀಡುವುದು?*

ಇ) *ಸದರಿ ಸಾಲ ಎಂದಿನಿಂದ ಬಾಕಿ ಇದೆ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 1. ಹುಡ್ಕೋ

2. ಕೆ.ಯು.ಐ.ಡಿ.ಎಫ್.ಸಿ ಮತ್ತು

3. ಬಾಂಡ್ ಯೋಜನೆ

ಆ)

ಸಂಸ್ಥೆ ಹೆಸರು	ಒಟ್ಟು ಸಾಲ	ಮರುಪಾವತಿ ಆಸಲು	ಬಡ್ಡಿ	ಉಳಿದ ಸಾಲ
			(ರೂ. ಲಕ್ಷಗಳಲ್ಲಿ)	
1. ಹುಡ್ಕೋ	6539.25	1464.05	3173.89	5075.20
2. ಕೆ.ಯು.ಐ.ಡಿ.ಎಫ್.ಸಿ	5003.19	-	330.13	5003.19
ಒಟ್ಟು	**11542.44**	**1464.05**	**3504.02**	**10078.39**

125.00 ಕೋಟಿ ರೂ.ಗಳ ಬಾಂಡ್ ಮೂಲಕ ಸಂಗ್ರಹಿಸಿರುವ ಹಣಕ್ಕೆ ಜುಲೈ 2000 ರವರೆಗೆ ರೂ. 42.25 ಕೋಟಿ ಬಡ್ಡಿ ಹಣವನ್ನು ಪಾವತಿಸಲಾಗಿರುತ್ತದೆ.

ಇ) 1989-90.

ಬೆಂಗಳೂರು ಮಹಾನಗರದ ಮೇಲು ಸೇತುವೆ ನಿರ್ಮಾಣ ಕುರಿತು

4494 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರದಲ್ಲಿ ಮೇಲು ಸೇತುವೆಯನ್ನು (ಫ್ಲೈಓವರ್)ಗಳನ್ನು ಆದಷ್ಟು ಬೇಗ ಮುಗಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?*

ಆ) *ಈಗಾಗಲೇ ಪ್ರಾರಂಭವಾಗಿರುವ ಮೇಲುಸೇತುವೆಗಳನ್ನು ಬಿಟ್ಟು ನಗರದಲ್ಲಿ ಮತ್ತೇನಾದರೂ ಮೇಲು ಸೇತುವೆಗಳನ್ನು ಕಟ್ಟಲು ಸರ್ಕಾರ ತೀರ್ಮಾನಿಸಿದೆಯೇ?*